# ಸಹ್ಯಾದ್ರಿ ಕ್ಯಾಂಪಸ್‌ನಲ್ಲಿ ಪದವಿ ಪ್ರದಾನ



ಮಂಗಳೂರು, ಮೇ 22: ಅಡ್ಯಾರ್ ಸಹ್ಯಾದ್ರಿ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆಯಲ್ಲಿ ಬ್ಯಾಚುಲರ್ ಆಫ್ ಎಂಜಿನಿಯರಿಂಗ್ ಮತ್ತು ಎಂ.ಟೆಕ್. ವಿದ್ಯಾರ್ಥಿಗಳ ಪದವಿ ಪ್ರದಾನ ಸಮಾರಂಭ ಜರಗಿತು.

ಸಮಾರಂಭದಲ್ಲಿ 840 ವಿದ್ಯಾರ್ಥಿಗಳಿಗೆ ಪ್ರಮಾಣ ವಚನ ಬೋಧಿಸಿ, ಪ್ರಮಾಣ ಪತ್ರ ನೀಡಲಾಯಿತು.

ಮುಖ್ಯ ಅತಿಥಿ, ಬೆಂಗಳೂರು ಐಟಿಸಿ ಇನ್ಫೋಟೆಕ್ ಇಂಡಿಯಾ ಲಿಮಿಟೆಡ್‌ನ ಉಪಾಧ್ಯಕ್ಷ ಎಸ್. ರಾಜೇಶ್ ಚಂದ್ರನ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಅಧ್ಯಯನ ವಿಷಯದ ಕುರಿತು ಆಳವಾದ ಜ್ಞಾನವನ್ನು ಪಡೆದು ಮುನ್ನಡೆಯಬೇಕು ಎಂದರು.

ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ.ಯ ರಿಜಿಸ್ಟ್ರಾರ್ ಡಾ| ಎಚ್.ಎನ್. ಜಗನ್ನಾಥ ರೆಡ್ಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಪದವಿ ಪಡೆದ ವಿದ್ಯಾರ್ಥಿಗಳು ಅನುಭವ ಹಂಚಿಕೊಂಡರು.

ಭಂಡಾರಿ ಫೌಂಡೇಶನ್ ಅಧ್ಯಕ್ಷ ಡಾ| ಮಂಜುನಾಥ್ ಭಂಡಾರಿ, ಆಡಳಿತ ಮಂಡಳಿ ನಿರ್ದೇಶಕ ಡಾ| ಡಿ.ಎಲ್. ಪ್ರಭಾಕರ್, ನಿರ್ದೇಶಕ (ಕಾರ್ಯತಂತ್ರ ಮತ್ತು ಯೋಜನೆ) ಡಾ| ಯು.ಎಂ. ಭುಶಿ, ಪ್ರಾಂಶುಪಾಲ ಡಾ| ಆರ್. ಶ್ರೀನಿವಾಸ ರಾವ್ ಕುನ್ಹೆ ಮೊದಲಾದ ಗಣ್ಯರು ಭಾಗವಹಿಸಿದ್ದರು.

# ಮೇ 27: 'ಯಕ್ಷಧ್ರುವ ಪಟ್ಲ ಸ

ಮಂಗಳೂರು, ಮೇ 22: ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಮೂರನೇ ವರ್ಷದ 'ಯಕ್ಷಧ್ರುವ ಪಟ್ಲ ಸಂಭ್ರಮ- 2018' ಮೇ 27ರಂದು ನಗರದ ಹೊರ ವಲಯದ ಅಡ್ಯಾರ್ ಗಾರ್ಡನ್‌ನಲ್ಲಿ ಜರಗಲಿದೆ ಎಂದು ಟ್ರಸ್ಟಿನ ಸ್ಥಾಪಕಾಧ್ಯಕ್ಷ ಸತೀಶ್ ಶೆಟ್ಟಿ ಪಟ್ಲ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ಬಾರಿಯ ಪಟ್ಲಸಂಭ್ರಮದಲ್ಲಿ ಇನ್ನಷ್ಟು ಸೇವಾ ಕಾರ್ಯದ ಜತೆಗೆ ವಿವಿಧ ಕಲಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಬೆಳಗ್ಗೆ 8ಕ್ಕೆ ಮುಂಬಯಿ ಉದ್ಯಮಿ ಎನ್.ಟಿ. ಪೂಜಾರಿ ಉದ್ಘಾಟಿಸಲಿದ್ದಾರೆ. ರಕ್ತದಾನ ಶಿಬಿರ, ವೈದ್ಯಕೀಯ ತಪಾಸಣೆ, ಔಷಧ ವಿತರಣೆ ನಡೆಯಲಿದೆ.

ಬಳಿಕ ಯಕ್ಷ ಸಪ್ತ ಸ್ವರ, ಮಹಿಳಾ ಯಕ್ಷಗಾನ, ತಾಳಮದ್ದಳೆ, ಯಕ್ಷಗಾನ ನೃತ್ಯ, ದುಬ್ಯಾ ಮಕ್ಕಳ ತಂಡದ ಯಕ್ಷಗಾನ, ರಾತ್ರಿ ಯಕ್ಷಗಾನ ಹಾಸ್ಯ ವೈಭವ, ಯಕ್ಷಗಾನ ಜರಗಲಿದೆ. ಸಂಜೆ ಸಭಾ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಒಡಿಯೂರಿನ ಶ್ರೀ ಗುರುದೇವಾನಂದ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.

ಚಿತ್ರನಟರಾದ ದರ್ಶನ್ ಹಾಗೂ ಋಷಭ್ ಶೆಟ್ಟಿ ಭಾಗವಹಿಸಲಿದ್ದಾರೆ.

## ಪುರಸ್ಕಾರ ಪ್ರದಾನ

ಛಂದೋಬ್ರಹ್ಮ ಡಾ| ಶಿಮಂತೂರು ನಾರಾಯಣ ಶೆಟ್ಟಿ ಅವರಿಗೆ ಒಂದು ಲಕ್ಷ ರೂ. ನಗದಿನೊಂದಿಗೆ ಪಟ್ಲ ಪ್ರಶಸ್ತಿ, 10 ಮಂದಿಗೆ ಯಕ್ಷಧ್ರುವ ಕಲಾ ಗೌರವ, ವಿದ್ಯಾರ್ಥಿವೇತನ, ಪ್ರತಿಭಾ ಪುರಸ್ಕಾರ, 12 ಮಂದಿಗೆ ತಲಾ 50,000 ರೂ. ಗೌರವಧನ, 15 ಮಂದಿಗೆ ಗೃಹ ನಿರ್ಮಾಣಕ್ಕೆ 25,000 ರೂ. ಸಹಾಯಧನ, ಕೃತಿ ಬಿಡುಗಡೆ ನಡೆಯಲಿದೆ.

## ಮೇ 27: ರಾಜಾಪುರದಲ್ಲಿ ಕವಳೆ ಶ್ರೀ ಆಶೀರ್ವಚನ

ಉಡುಪಿ, ಮೇ22: ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆ ರಾಜಾಪುರದ ಆಡಿವರೆ ಗ್ರಾಮದ ಶ್ರೀ ಮಹಾಕಾಲೀ ಸಂಸ್ಥಾನ ದೇಗುಲ ಸಂಕೀರ್ಣದಲ್ಲಿರುವ ಶ್ರೀ ಮಹಾಲಕ್ಷ್ಮೀ ದೇವಿಯ ಸಂದರ್ಶನ ಮೇ 27ರ ಬೆಳಗ್ಗೆ 10ರಿಂದ 2.30ರ ತನಕ ನಡೆಯಲಿದ್ದು, ಗೋವಾ ಕವಳೆ ಮಠದ ಶ್ರೀಮತ್ ಶಿವಾನಂದ ಸರಸ್ವತೀ ಗೌಡಪಾದಾಚಾರ್ಯ ಸ್ವಾಮೀ ಮಹಾರಾಜ್ ಆಶೀರ್ವಚನ ನೀಡುವರು.

ಮೇ 26ರಂದು ಮಂಗಳೂರು, ಉಡುಪಿಯಿಂದ ಹೊರಟು ಮೇ 28ರ ಬೆಳಗ್ಗೆ ಹಿಂದಿರುಗಲು ರೈಲ್ವೇ ಬೋಗಿ ವ್ಯವಸ್ಥೆ ಮಾಡಲಾಗಿದೆ ಎಂದು ಸಂಘಟಕ ಎಂ. ಗೋಕುಲದಾಸ್ ನಾಯಕ್ ತಿಳಿಸಿದ್ದಾರೆ.

## ಇಂದು ಬಿಜೆಪಿ ಕರಾಳ ದಿನಾಚರಣೆ

ಉಡುಪಿ, ಮೇ 22: ಜನರ ತೀರ್ಪಿಗೆ ವಿರುದ್ಧವಾಗಿ ಕಾಂಗ್ರೆಸ್ ಮತ್ತು ಜೆಡಿಎಸ್ ಸರಕಾರ ರಚನೆ ಮಾಡಿರುವುದನ್ನು ವಿರೋಧಿಸಿ ಬಿಜೆಪಿ ವತಿಯಿಂದ ರಾಜ್ಯಾದ್ಯಂತ ಕರಾಳ ದಿನಾಚರಣೆ ನಡೆಯಲಿದೆ. ಅದರಂತೆ ಉಡುಪಿಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಬೆಳಗ್ಗೆ 11 ರಿಂದ 12ರವರೆಗೆ ಕರಾಳ ದಿನಾಚರಣೆ ನಡೆಸಲಾಗುವುದು ಎಂದು ಉಡುಪಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಮಟ್ಟಾರು ರತ್ನಾಕರ ಹೆಗ್ಡೆ ತಿಳಿಸಿದ್ದಾರೆ.

3ನೇ ಹುಟ್ಟುಹಬ್ಬದ ಶುಭಾಶಯಗಳು

ಹಾಸಿನಿ ಮೂರ್ತಿ
ಶುಭಕೋರುವವರು
ಅತ್ತೆ, ಅಕ್ಕ, ಮತ್ತು ಬಂಧುಮಿತ್ರರು.

ಪ್ರಥಮ ಹುಟ್ಟುಹಬ್ಬದ ಶುಭಾಶಯ

ಬೇಬಿ ಸಾಧ್ವಿ ವಿ. ಶೆಟ್ಟಿಗಾರ್
ಅಗ್ರಸಾಲೆ ಮನೆ, ಸುರತ್ಕಲ್
ಶುಭಕೋರುವ,
ಶ್ರೀಮತಿ ಇಂದಿರಾ ಮತ್ತು ಶ್ರೀ ಪುರುಷೋತ್ತಮ ಶೆಟ್ಟಿಗಾರ್ (ಅಜ್ಜ- ಅಜ್ಜಿ)
ಅಗ್ರಸಾಲೆ ಮನೆ - ಸುರತ್ಕಲ್

ವೈವಾಹಿಕ ಜೀವನದ ಸುವರ್ಣ ಮಹೋತ್ಸವ

ಶ್ರೀ ಸಂಕಯ್ಯ ಶೆಟ್ಟಿ ಮತ್ತು ಶ್ರೀಮತಿ ವನಜಾ ಎಸ್. ಶೆಟ್ಟಿ
ಹೊಟೇಲ್ ಶ್ರೀಕೃಷ್ಣ, ಮಾನ್‌ಪಾಡ, ಥಾಣೆ
"ಅಕ್ಕಮ್ಮ ನಿಲಯ" ಹೇರೂರು ಭಂಡ್ಸಾಲೆಮನೆ
ದಾಂಪತ್ಯ ಜೀವನದ 50 ಸಂವತ್ಸರಗಳನ್ನು ಯಶಸ್ವೀಯಾಗಿ ಪೂರೈಸಿರುವ ನಿಮ್ಮ ಮುಂದಿನ ಜೀವನ ಸುಖಮಯವಾಗಿರಲಿ. ಶ್ರೀ ದೇವರು ನಿಮಗೆ ದೀರ್ಘಾಯುಷ್ಯ, ಸುಖ, ಶಾಂತಿ, ಸಮೃದ್ಧಿ ಮತ್ತು ನೆಮ್ಮದಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸಿ, ಶುಭಹಾರೈಸುವ,
• ಶೋಭಾ ಭಾಸ್ಕರ್ ಶೆಟ್ಟಿ ಮತ್ತು ಮಕ್ಕಳು ಹೇರೂರು
• ಸುಮ ಪ್ರಶಾಂತ್ ಶೆಟ್ಟಿ ಮತ್ತು ಮಕ್ಕಳು ಹೇರೂರು
• ಪೂರ್ಣಿಮಾ ಪ್ರವೀಣ್ ಶೆಟ್ಟಿ ಮತ್ತು ಮಕ್ಕಳು ಹೇರೂರು


ಅಭಿನಂದನೆಗಳು
ಕೂರಿಯಾಳ ಹಾಂಬೋಡಿಗುತ್ತು ಶ್ರೀ ಸೀತಾರಾಮ ಶೆಟ್ಟಿ ಮತ್ತು ಶ್ರೀಮತಿ ರೇಖಾ ಶೆಟ್ಟಿ ದಂಪತಿಯ ಪುತ್ರಿ, ಮೊಡಂಕಾಪು ಇನ್‌ಫೆಂಟ್ ಜೀಸಸ್ ಆಂಗ್ಲ ಮಾಧ್ಯಮ ಶಾಲಾ ವಿದ್ಯಾರ್ಥಿನಿ 2017-18ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯಧಿಕ 619 ಅಂಕಗಳಿಸಿ, (ಶೇ. 99.04%) ಹೆಮ್ಮೆ ತಂದ ನಿನಗೆ ಹೃತ್ಪೂರ್ವಕ ಅಭಿನಂದನೆಗಳು. ನಿನ್ನ ಮುಂದಿನ ಶೈಕ್ಷಣಿಕ ಜೀವನದಲ್ಲಿ ಇನ್ನಷ್ಟು ಯಶಸ್ಸು ಲಭಿಸಲಿ ಎಂದು ಹಾರೈಸುವ.
ಹರೀಶ್ ಕುಮಾರ್ ಶೆಟ್ಟಿ, ಕೋಂಕೊಡಿ

ಹೃತ್ಪೂರ್ವಕ
ಶ್ರೀ ಡಿ. ವೇದವ್ಯಾಸ
ಶಾಸಕರು
ಮಂಗಳೂರು ದಕ್ಷಿ
ಶಾಸಕರಾಗಿ ಅತ್ಯಧಿಕ ಮತಗ
ಅಭಿನಂದನೆಗಳು. ತಮ್ಮ ಅಧಿ
ಸರ್ವತೋಮುಖ ಅಭ
• K.C. Prabhu & F
• K. Sudhakar Pr
• K. Madhukar Pr
• K. Manjunath P
• M. Narendra Pa
• B. Ganesh Prab
• K. Vaman Kudv
• R. Ravindra Pa
• R. Rajendra Pa
• R. Ramachandi